L.E.ASSOCIATION's

# HURAKADLI AJJA LAW COLLEGE, DHARWAD.

## NOTICE

It is hereby informed that "**Constitution Day**" will be celebrated under IQAC of our college in association with District Legal Services Authority, Dharwad on 27-11-2023 at 9-00 am in college premises. All the Teaching, Non-Teaching Staff and Students shall attend the same.

Date: 25-11-2023.

PRINCIPAL
Hurakadli Ajja Law College
Dharwad-580 008

ಫ್ಯಾಕ್ಸ್ (Fax): 0836 – 2740128
E-mail ID: dlsa.dwd2@gmail.com

# ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ

ಎ.ಡಿ.ಆರ್. ಕಟ್ಟಡ, ದಿವಾಣಿ ನ್ಯಾಯಾಲಯಗಳ ಆವರಣ, ಪಿ.ಬಿ. ರಸ್ತೆ, ಧಾರವಾಡ – 580 001.

# DISTRICT LEGAL SERVICES AUTHORITY

ADR BUILDING, CIVIL COURTS PREMISES, P.B. ROAD, DHARWAD – 580 001.

ಸಂಖ್ಯೆ: ಜಿಕಾಸೇಪ್ರಾಧಾ:
No.: DLSADwd : 1212 /2023

ಸದಸ್ಯ ಕಾರ್ಯದರ್ಶಿಗಳವರ ಕಾರ್ಯಾಲಯ
Office of the Member Secretary

ದಿನಾಂಕ: 18–11–2023

ಗೆ,

1. ಮಾನ್ಯ ಉಪ ಕುಲಪತಿಗಳು,
   ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ. ಹುಬ್ಬಳ್ಳಿ.
2. ಮಾನ್ಯ ಉಪ ಕುಲಪತಿಗಳು,
   ಕರ್ನಾಟಕ ವಿಶ್ವ ವಿದ್ಯಾನಿಲಯ, ಧಾರವಾಡ
3. ಮಾನ್ಯ ಕುಲಪತಿಗಳು,
   ಕೃಷಿ ವಿಶ್ವವಿದ್ಯಾಲಯ, ಧಾರವಾಡ.

Legal And cell (Aid) ~~AR~~ To
Frame ~~notice~~ Circular
to all College
22/11/2023

ವಿಷಯ: ದಿನಾಂಕ: 26–11–2023 ರಂದು ರಾಷ್ಟ್ರಾದ್ಯಂತ "ಭಾರತ ಸಂವಿಧಾನ ದಿನ" ವನ್ನು ಆಚರಿಸಲಾಗುತ್ತಿದ್ದು ಆ ಕುರಿತು ತಮ್ಮ ಕಾರ್ಯವ್ಯಾಪ್ತಿಯಲ್ಲಿ ಬರುವ ಎಲ್ಲಾ ಕಾನೂನು ಮಹಾ ವಿದ್ಯಾಲಯಗಳು / ಪದವಿ ಮಹಾ ವಿದ್ಯಾಲಯಗಳ ವಿದ್ಯಾರ್ಥಿಗಳಿಗೆ ಸಂವಿಧಾನದ ಪೀಠಿಕೆ, ಮೂಲಭೂತ ಹಕ್ಕು ಮತ್ತು ಕರ್ತವ್ಯಗಳ ಬಗ್ಗೆ ಅರಿವು ಮೂಡಿಸುವ ಕುರಿತು.

* * * * *

ಮಾನ್ಯರೇ,

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಈ ಮೂಲಕ ತಮಗೆ ತಿಳಿಸುವುದೇನೆಂದರೆ **ದಿನಾಂಕ: 26–11–2023** ರಂದು ಪ್ರತಿ ವರ್ಷದಂತೆ ಈ ವರ್ಷವು ರಾಷ್ಟ್ರಾದ್ಯಂತ **"ಭಾರತ ಸಂವಿಧಾನ ದಿನ"** ವನ್ನು ಆಚರಿಸಲಾಗುತ್ತಿದೆ. ಆ ಕಾರಣ ಸದರಿ ಕಾರ್ಯಕ್ರಮವು ಅರ್ಥಪೂರ್ಣವಾಗಿ ಆಚರಿಸಬೇಕಾಗಿರುವುದರಿಂದ ಹಾಗೂ ಪ್ರತಿಯೊಬ್ಬರಿಗೂ ಸಂವಿಧಾನದಲ್ಲಿರುವ ಪೀಠಿಕೆ, ಮೂಲಭೂತ ಹಕ್ಕು ಮತ್ತು ಕರ್ತವ್ಯಗಳ ಕುರಿತು ಅರಿವು ಮೂಡಿಸುವ ಉದ್ದೇಶದಿಂದ ತಮ್ಮ ಕಾರ್ಯವ್ಯಾಪ್ತಿಯಲ್ಲಿ ಬರುವ ಎಲ್ಲಾ ಕಾನೂನು ಮಹಾ ವಿದ್ಯಾಲಯಗಳು / ಪದವಿ ಮಹಾ ವಿದ್ಯಾಲಯಗಳ ವಿದ್ಯಾರ್ಥಿಗಳಿಗೆ ಸಂಬಂಧಪಟ್ಟ ರಾಜ್ಯಶಾಸ್ತ್ರ / ಇತಿಹಾಸ ಶಿಕ್ಷಕರಿಂದ ಸಂವಿಧಾನದ ಪೀಠಿಕೆ, ಮೂಲಭೂತ ಹಕ್ಕು ಮತ್ತು ಕರ್ತವ್ಯಗಳ ಕುರಿತು ಇರುವ ಮಾಹಿತಿಯನ್ನು ಭೋದಿಸುವಂತೆ ಹಾಗೂ **ಆ ಕುರಿತು ಇರುವ ಕಾನೂನು ಮಹಾ ವಿದ್ಯಾಲಯಗಳು / ಪದವಿ ಮಹಾ ವಿದ್ಯಾಲಯಗಳ ಹೆಸರು ಸಹಿತ ಹಾಗೂ ಛಾಯಾಚಿತ್ರಗಳನ್ನು** ನಮ್ಮ ಕಛೇರಿಯ ಇ-ಮೇಲ್ dlsa.dwd2@gmail.com ಗೆ **ದಿನಾಂಕ: 27–11–2023ರ ಸಂಜೆ 05.00 ಗಂಟೆಯ ಒಳಗಾಗಿ ತಪ್ಪದೇ ಕಳುಹಿಸಿಕೊಡುವಂತೆ** ಸಂಬಂಧಪಟ್ಟ ಕಾನೂನು ಮಹಾ ವಿದ್ಯಾಲಯಗಳು / ಪದವಿ ಮಹಾ ವಿದ್ಯಾಲಯಗಳ ಪ್ರಾಂಶುಪಾಲರಿಗೆ ನಿರ್ದೇಶನ ನೀಡುವಂತೆ ತಮ್ಮನ್ನು ಕೋರಲು ಗೌರವಾನ್ವಿತ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಅಧ್ಯಕ್ಷರು, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಧಾರವಾಡ ಇವರಿಂದ ನಿರ್ದೇಶಿತನಾಗಿದ್ದೇನೆ.

ತಮ್ಮ ವಿಶ್ವಾಸಿ,
18-11-2023
(ಪರಶುರಾಮ ಎಫ್. ದೊಡ್ಡಮನಿ)
ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ
ಸದಸ್ಯ ಕಾರ್ಯದರ್ಶಿಗಳು,
ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ,
ಧಾರವಾಡ.

Inwd 290 22/11/23
PRINCIPAL
Hurakadli Ajja Law College
Dharwad-580 008

L.E.A.'s HURAKADLI AJJA LAW COLLEGE ★ DHARWAD 580 008 KARNATAKA

INWARD No: 664
DATE: 25-11-2023

ಕರ್ನಾಟಕರಾಜ್ಯ ಕಾನೂನು ವಿಶ್ವವಿದ್ಯಾಲಯ
ಕಾನೂನು ಸೇವಾ ಘಟಕ
ನವನಗರ, ಹುಬ್ಬಳ್ಳಿ– 580025
ನ್ಯಾಕ 'ಎ' ಶ್ರೇಣಿ ಮಾನ್ಯತೆ

ಸಂಖ್ಯೆ: ಕರಾಕಾವಿ/ಕಾಸೇಘ/2023–24/ 2054 ದಿನಾಂಕ 22.11.2023

## ಸುತ್ತೋಲೆ

ವಿಷಯ: ಕ.ರಾ.ಕಾ.ವಿ.ಯ ಎಲ್ಲ ಸಂಯೋಜಿತ ಕಾನೂನು ಮಹಾವಿದ್ಯಾಲಯಗಳು ದಿನಾಂಕ : 26.11.2023 ರಂದು ಭಾರತ ಸಂವಿಧಾನ ದಿನವನ್ನು ಆಯೋಜಿಸುವ ಕುರಿತು.

ಉಲ್ಲೇಖ: 1. ಪತ್ರದ ಸಂಖ್ಯೆ:ಜಿಕಾಸೇಪ್ರಾಧಾ ದಿನಾಂಕ:18/11/2023.
2. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 23/11/2023

ಮೇಲ್ಕಾಣಿಸಿದ ವಿಷಯ ಹಾಗೂ ಉಲೇಖಕ್ಕೆ ಸಂಬಂಧಿಸಿದಂತೆ, **'ಭಾರತ ಸಂವಿಧಾನ ದಿನ'** ದ ಕಾರ್ಯಕ್ರಮವನ್ನು ಅರ್ಥಪೂರ್ಣವಾಗಿ ಆಚರಿಸಲು ಹಾಗೂ ಪ್ರತಿಯೊಬ್ಬರಿಗೂ ಸಂವಿಧಾನದಲ್ಲಿರುವ ಪೀಠಿಕೆ, ಮೂಲಭೂತ ಹಕ್ಕು ಮತ್ತು ಕರ್ತವ್ಯಗಳ ಕುರಿತು ಅರಿವು ಮೂಡಿಸುವ ಕಾರ್ಯಕ್ರಮವನ್ನು, ಕ.ರಾ.ಕಾ.ವಿ.ಯ ಎಲ್ಲ ಸಂಯೋಜಿತ ಕಾನೂನು ಮಹಾವಿದ್ಯಾಲಯಗಳು, ವಿದ್ಯಾರ್ಥಿಗಳಿಗೆ ಸಂಬಂಧಪಟ್ಟ ರಾಜ್ಯಶಾಸ್ತ್ರ/ಇತಿಹಾಸ ಶಿಕ್ಷರಿಂದ ಸಂವಿಧಾನದ ಪೀಠಿಕೆ, ಮೂಲಭೂತ ಹಕ್ಕು ಮತ್ತು ಕರ್ತವ್ಯಗಳ ಕುರಿತು ಇರುವ ಮಾಹಿತಿಯನ್ನು ಭೋದಿಸುವಂತೆ ಹಾಗೂ ಈ ಸಂಬಂಧ ಆಯೋಜಿಸಿದ ಕಾರ್ಯಕ್ರಮದ ಛಾಯಾಚಿತ್ರಗಳನ್ನು ಕಾನೂನು ಮಹಾವಿದ್ಯಾಲಯಗಳ ಹೆಸರು ಹಾಗೂ ಸಂಕ್ಷಿಪ್ತ ವರದಿ ಸಮೇತ ಇ–ಮೇಲ್ ವಿಳಾಸಕ್ಕೆ dlsa.dwd2@gmail.com ದಿನಾಂಕ 27.11.2023 ರ ಸಂಜೆ 5:00 ಗಂಟೆಯ ಒಳಗಾಗಿ ತಪ್ಪದೆ ಕಳುಹಿಸಿಕೊಡುವಂತೆ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಧಾರವಾಡ ಇವರು ನಿರ್ದೇಶನ ನೀಡಿರುತ್ತಾರೆ.

ಆದ್ದರಿಂದ ಕ.ರಾ.ಕಾ.ವಿ.ಯ ಎಲ್ಲ ಸಂಯೋಜಿತ ಕಾನೂನು ಮಹಾವಿದ್ಯಾಲಯಗಳು, ದಿನಾಂಕ 26.11.2023 ರಂದು **'ಭಾರತ ಸಂವಿಧಾನ ದಿನ'**ವನ್ನು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಧಾರವಾಡ ಇವರ ನಿರ್ದೇಶನದ ಪ್ರಕಾರ ಈ ಕಾರ್ಯಕ್ರಮವನ್ನು ಅರ್ಥಪೂರ್ಣವಾಗಿ ಆಯೋಜಿಸುವಂತೆ ಸೂಚಿಸಿದೆ. ಅಂತೆಯೇ, ದಿನಾಂಕ 27.11.2023 ರ ಸಂಜೆ 5:00 ಗಂಟೆಯ ಒಳಗಾಗಿ ಹಮ್ಮಿಕೊಂಡ ಕಾರ್ಯಕ್ರಮದ ಕುರಿತ ಛಾಯಾಚಿತ್ರಗಳನ್ನು ಮತ್ತು ವರದಿಯನ್ನು ಇ–ಮೇಲ್ ವಿಳಾಸಕ್ಕೆ (dlsa.dwd2@gmail.com ) ಕಳಿಸಲು ಸೂಚಿಸಿದೆ.

ಹೆಚ್ಚಿನ ಮಾಹಿತಿಗಾಗಿ ಈ ಪತ್ರದೊಂದಿಗೆ ಲಗತ್ತಿಸಿದ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಪತ್ರವನ್ನು ಅನುಸರಿಸಲು ಸೂಚಿಸಿದೆ.

ಕುಲಸಚಿವರು

ಗೆ,
ಪ್ರಾಂಶುಪಾಲರು
ವಿಶ್ವವಿದ್ಯಾಲಯದ ಎಲ್ಲ ಸಂಯೋಜಿತ ಕಾನೂನು ಮಹಾವಿದ್ಯಾಲಯಗಳು
ಕರ್ನಾಟಕರಾಜ್ಯ ಕಾನೂನು ವಿಶ್ವವಿದ್ಯಾಲಯ.
ನವನಗರ, ಹುಬ್ಬಳ್ಳಿ,

ಪ್ರತಿಯನ್ನು: ವಿಶೇಷಾಧಿಕಾರಿಗಳು, ಮಾನ್ಯ ಕುಲಪತಿಗಳ ಕಾರ್ಯಾಲಯ, ಕರಾಕಾವಿ, ಹುಬ್ಬಳ್ಳಿ

INWARD No:
DATE:

# ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ

ನವನಗರ, ಹುಬ್ಬಳ್ಳಿ-580025

ನ್ಯಾಕ 'ಎ' ಶ್ರೇಣಿ ಮಾನ್ಯತೆ

ರಾಷ್ಟ್ರೀಯ ಸೇವಾ ಯೋಜನಾ ಕೋಶ

ಫೋನ್: 0836-2222267, ಇ-ಮೇಲ್: kslunsscell@yahoo.in

ಫ್ಯಾಕ್ಸ್: 2223392 ಜಾಲತಾಣ: www.kslu.karnataka.gov.in


ಸಂಖ್ಯೆ: ಕರಾಕಾವಿ/ರಾಸೇಯೋ/2023-24/2088 ದಿನಾಂಕ: 24-11-2023

## ಸುತ್ತೋಲೆ

ವಿಷಯ: ಸಂವಿಧಾನ ದಿನವನ್ನು ಆಚರಿಸುವ ಕುರಿತು.

ಉಲ್ಲೇಖ: 1. ಇ-ಮೇಲ್ ಪತ್ರದ F.No.P29/1/2023/NSS/DTE/1748-1799, ದಿನಾಂಕ: 15-11-2023.
2. ಯುಸೇಇ/ರಾಸೇಯೋ/19/2021/2023-24/368, ದಿನಾಂಕ: 21-11-2023.
3. ಮಾನ್ಯ ಕುಲಪತಿಗಳ ಅನುಮೋದನೆಯ ದಿನಾಂಕ: 24/11/2023

ಮೇಲ್ಕಾಣಿಸಿದ ವಿಷಯ ಮತ್ತು ಉಲ್ಲೇಖಿತ ಪತ್ರ 1ರಲ್ಲಿ ಮಾನ್ಯ ನಿರ್ದೇಶಕರು, ರಾಷ್ಟ್ರೀಯ ಸೇವಾ ಯೋಜನೆ, ಯುವಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಭಾರತ ಸರ್ಕಾರ ರವರ ಆದೇಶದಂತೆ, "ಭಾರತ ಸಂವಿಧಾನ"ವು ಭಾರತದ ಸಂವಿಧಾನ ಸಭೆಯಲ್ಲಿ ಅಂಗೀಕರಿಸಲ್ಪಟ್ಟ ದಿನವಾದ 26ನೇ ನವೆಂಬರ್ 1949 ರ ಸವಿನೆನಪಿಗಾಗಿ, ಪ್ರತಿ ವರ್ಷ ನವೆಂಬರ್ 26 ರಂದು ಭಾರತದ ಸಂವಿಧಾನ ದಿನವನ್ನು ಆಚರಿಸುತ್ತಿದ್ದು, ತಮ್ಮ ಮಹಾವಿದ್ಯಾಲಯಗಳಲ್ಲಿ ಕಡ್ಡಾಯವಾಗಿ ಸಂವಿಧಾನದ ಪ್ರಸ್ತಾವನೆಯನ್ನು ಓದುವ ಮೂಲಕ ಮೂಲಭೂತ ಹಕ್ಕು, ಕರ್ತವ್ಯಗಳನ್ನು ಮತ್ತು ಸಂವಿಧಾನದ ಕೊಡುಗೆ ಬಗ್ಗೆ ಅರಿವನ್ನು ಮೂಡಿಸುವಂತಹ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲು ತಿಳಿಸಲಾಗಿದೆ.

24/11/23

ಕುಲಸಚಿವರು

ಗೆ,

ಪ್ರಾಚಾರ್ಯರು/ಎನ್.ಎಸ್.ಎಸ್.ಕಾರ್ಯಕ್ರಮಾಧಿಕಾರಿಗಳು
ವಿಶ್ವವಿದ್ಯಾಲಯದ ಸಂಯೋಜಿತ ಕಾನೂನು ಮಹಾವಿದ್ಯಾಲಯಗಳ
ಎನ್.ಎಸ್.ಎಸ್. ಘಟಕಗಳು.

ಪ್ರತಿಯನ್ನು:

4) ಮಾನ್ಯ ಕುಲಪತಿಗಳ ವಿಶೇಷಾಧಿಕಾರಿಗಳು, ಕರಾಕಾವಿ, ಹುಬ್ಬಳ್ಳಿ.
5) ಕುಲಸಚಿವರ ಆಪ್ತ ಕಾರ್ಯದರ್ಶಿಗಳು, ಕರಾಕಾವಿ, ಹುಬ್ಬಳ್ಳಿ.
6) ಕಛೇರಿ ಪ್ರತಿ

L.E.A.'s HURAKADLI AJJA LAW COLLEGE DHARWAD 580 008 KARNATAKA

PRINCIPAL
Hurakadli Ajja Law College
Dharwad-580 008

B.B.S

INWARD No: 665
DATE: 25-11-2023

Scanned with OKEN Scanner

ಕರ್ನಾಟಕ ಸರ್ಕಾರ
ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ:ಕಾಶಿಇ/ಪ್ರಾಕಧಾ/226/ಸುತ್ತೋಲೆ/ಜಿಇಎಸ್-1/2022-23 ಪ್ರಾದೇಶಿಕ ಜಂಟಿ ನಿರ್ದೇಶಕರ ಕಛೇರಿ
ಧಾರವಾಡ ದಿನಾಂಕ : 24/11/2023

## ಸುತ್ತೋಲೆ

ಈ ಕಛೇರಿ ವ್ಯಾಪ್ತಿಯ ಎಲ್ಲ ಸರ್ಕಾರಿ/ಖಾಸಗಿ ಅನುದಾನಿತ ಕಾಲೇಜುಗಳ ಪ್ರಾಂಶುಪಾಲರುಗಳಿಗೆ ಈ ಮೂಲಕ ತಿಳಿಸುವುದೇನೆಂದರೆ, ಸರ್ಕಾರದ ಪತ್ರ ಸಂಖ್ಯೆ: DPAR/09/PHL/2023 ದಿನಾಂಕ: 20.11.2023ರ ನಿರ್ದೇಶನದ ಮೇರೆಗೆ ಎಲ್ಲಾ ಕಾಲೇಜುಗಳಲ್ಲಿ ದಿನಾಂಕ: 26.11.2023 ರಂದು "ಸಂವಿಧಾನ ದಿನ"ವನ್ನು ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ರವರ ಭಾವಚಿತ್ರಕ್ಕೆ ಪುಷ್ಪ ನಮನವನ್ನು ಸಲ್ಲಿಸುವುದರೊಂದಿಗೆ ಹಾಗೂ ಭಾರತ ಸಂವಿಧಾನದ ಪೀಠಿಕೆಯನ್ನು ಓದುವುದರ ಮೂಲಕ ಸಂವಿಧಾನ ದಿನವನ್ನು ಅರ್ಥಪೂರ್ಣವಾಗಿ ಆಚರಿಸಲು ಸೂಚಿಸಲಾಗಿದೆ.

24/11/2023
ಪ್ರಾದೇಶಿಕ ಜಂಟಿ ನಿರ್ದೇಶಕರು(ಪ್ರ)
ಕಾಲೇಜು ಶಿಕ್ಷಣ ಇಲಾಖೆ, ಧಾರವಾಡ

ಇವರಿಗೆ

ಈ ಕಛೇರಿ ವ್ಯಾಪ್ತಿಗೊಳಪಡುವ ಎಲ್ಲ ಸರ್ಕಾರಿ/ಖಾಸಗಿ ಅನುದಾನಿತ ಕಾಲೇಜುಗಳ ಪ್ರಾಂಶುಪಾಲರುಗಳಿಗೆ ಅಗತ್ಯ ಕ್ರಮಕ್ಕಾಗಿ.

L.E.A.'s HURAKADLI AJJA LAW COLLEGE ★ DHARWAD 580 008 KARNATAKA

PRINCIPAL
Hurakadli Ajja Law College
Dharwad-580 008

INWARD No: 666
DATE: 25-11-2023

Scanned with CamScanner

ಕರ್ನಾಟಕ ಸರ್ಕಾರ

ಸಂಖ್ಯೆ: DPAR/09/PHL/2023

ಕರ್ನಾಟಕ ಸರ್ಕಾರ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:20.11.2023.

**ಇವರಿಂದ:**
ಸರ್ಕಾರದ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ,
ವಿಧಾನ ಸೌಧ, ಬೆಂಗಳೂರು.

**ಇವರಿಗೆ:**

1. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು/ ಪ್ರಧಾನ ಕಾರ್ಯದರ್ಶಿಗಳು /ಕಾರ್ಯದರ್ಶಿಗಳು.
2. ರಾಜ್ಯಪಾಲರ ವಿಶೇಷ ಕಾರ್ಯದರ್ಶಿ, ರಾಜಭವನ, ಬೆಂಗಳೂರು.
3. ಕಾರ್ಯದರ್ಶಿ, ಕರ್ನಾಟಕ ವಿಧಾನಸಭೆ, ವಿಧಾನಸೌಧ, ಬೆಂಗಳೂರು.
4. ಕಾರ್ಯದರ್ಶಿ, ಕರ್ನಾಟಕ ವಿಧಾನ ಪರಿಷತ್ತು, ವಿಧಾನಸೌಧ, ಬೆಂಗಳೂರು.
5. ಕಾರ್ಯದರ್ಶಿ, ಕರ್ನಾಟಕ ಲೋಕಸೇವಾ ಆಯೋಗ, ಉದ್ಯೋಗಸೌಧ, ಬೆಂಗಳೂರು.
6. ಎಲ್ಲಾ ಇಲಾಖಾ ಮುಖ್ಯಸ್ಥರುಗಳು,
7. ಎಲ್ಲಾ ಜಿಲ್ಲಾಧಿಕಾರಿಗಳು,
8. ಎಲ್ಲಾ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು.

**ಮಾನ್ಯರೇ,**

**ವಿಷಯ:-** ದಿನಾಂಕ: 26.11.2023 ರ ಭಾನುವಾರದಂದು "ಸಂವಿಧಾನ ದಿನಾಚರಣೆ" ಯನ್ನು ಆಚರಿಸುವ ಬಗ್ಗೆ.

**ಉಲ್ಲೇಖ:-** ಸಂಪುಟ ಕಾರ್ಯದರ್ಶಿಗಳು, ಭಾರತ ಸರ್ಕಾರ, ಇವರ ಪತ್ರ ಸಂಖ್ಯೆ:701/2/2/2022-Cab.III ದಿನಾಂಕ 13.11.2023.

** * **

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಭಾರತ ಸರ್ಕಾರದ ಪತ್ರದ ಪ್ರತಿಯನ್ನು ಇದರೊಂದಿಗೆ ಲಗತ್ತಿಸಿದೆ. ಸದರಿ ಪತ್ರದಲ್ಲಿನ ಸೂಚನೆಗಳನ್ವಯ, ಈ ವರ್ಷ 26 ನೇ ನವೆಂಬರ್ 2023 ರ ಭಾನುವಾರ ದಂದು **"ಸಂವಿಧಾನ ದಿನ"** ವನ್ನು ಅರ್ಥ ಪೂರ್ಣವಾಗಿ ಆಚರಿಸಲು ಸೂಕ್ತ ಕ್ರಮ ಕೈಗೊಳ್ಳುವಂತೆ ತಮ್ಮನ್ನು ಕೋರಲು ನಿರ್ದೇಶಿನಾಗಿದ್ದೇನೆ.

ತಮ್ಮ ವಿಶ್ವಾಸಿ,

**(ಮಹೇಶ್. ಆರ್)**
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಆಸುಇ (ರಾಜಕೀಯ)

**ಪ್ರತಿ :-**

1. ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
2. ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು- ಸೂಕ್ತ ಕ್ರಮಕ್ಕಾಗಿ

INWARD No: 666
DATE: 25-11-2023

Scanned with CamScanner

# ಭಾರತದ ಸಂವಿಧಾನ

## ಪೀಠಿಕೆ

ಭಾರತದ ಜನತೆಯಾದ ನಾವು,
ಭಾರತವನ್ನು ಸಾರ್ವಭೌಮ, ಸಮಾಜವಾದಿ, ಧರ್ಮನಿರಪೇಕ್ಷ
ಪ್ರಜಾಸತ್ತಾತ್ಮಕ ಗಣರಾಜ್ಯವನ್ನಾಗಿ
ರೂಪಿಸುವುದಕ್ಕಾಗಿ;
ಭಾರತದ ಎಲ್ಲಾ ಪ್ರಜೆಗಳಿಗೆ
ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯವನ್ನು;
ವಿಚಾರ, ಅಭಿವ್ಯಕ್ತಿ, ನಂಬಿಕೆ, ಶ್ರದ್ಧೆ ಮತ್ತು
ಉಪಾಸನೆಯ ಸ್ವಾತಂತ್ರ್ಯವನ್ನು;
ಸ್ಥಾನಮಾನ ಮತ್ತು ಅವಕಾಶಗಳ ಸಮತೆಯನ್ನು
ದೊರೆಯುವಂತೆ ಮಾಡುವುದಕ್ಕಾಗಿ;
ವ್ಯಕ್ತಿಗೌರವ, ದೇಶದ ಏಕತೆ ಮತ್ತು ಸಮಗ್ರತೆಗಾಗಿ ಎಲ್ಲರಲ್ಲಿ
ಭ್ರಾತೃತ್ವ ಭಾವನೆಯನ್ನು ಮೂಡಿಸುವುದಕ್ಕೆ
ದೃಢಸಂಕಲ್ಪ ಮಾಡಿ,
ನಮ್ಮ ಸಂವಿಧಾನ ಸಭೆಯಲ್ಲಿ
1949ನೆಯ ಇಸವಿಯ ನವೆಂಬರ್ ತಿಂಗಳ 26ನೇ ದಿನದಂದು,
ಈ ಸಂವಿಧಾನವನ್ನು ನಮಗೆ ನಾವೇ ಅರ್ಪಿಸಿಕೊಂಡು,
ಅಂಗೀಕರಿಸಿ, ಶಾಸನವಾಗಿ ವಿಧಿಸಿಕೊಂಡಿದ್ದೇವೆ.

KSEA's HURAKADLI AJJA LAW COLLEGE
DHARWAD 580 008 KARNATAKA

PRINCIPAL
Hurakadli Ajja Law College
Dharwad-580 008





सत्यमेव जयते

# ಭಾರತದ ಸಂವಿಧಾನ

## ಪೀಠಿಕೆ

ಭಾರತದ ಪ್ರಜೆಗಳಾದ ನಾವು, ಭಾರತವನ್ನು ಸಾರ್ವಭೌಮ,
ಸಮಾಜವಾದಿ, ಜಾತ್ಯತೀತ, ಪ್ರಜಾಸತ್ತಾತ್ಮಕ ಗಣರಾಜ್ಯವನ್ನಾಗಿ
ರೂಪಿಸುವುದಕ್ಕಾಗಿ ಭಾರತದ ಎಲ್ಲಾ ಪ್ರಜೆಗಳಿಗೆ

**ಸಾಮಾಜಿಕ ನ್ಯಾಯ**

ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯವನ್ನು

**ಸ್ವಾತಂತ್ರ್ಯ**

ವಿಚಾರ, ಅಭಿವ್ಯಕ್ತಿ, ನಂಬಿಕೆ, ಧರ್ಮ ಮತ್ತು ಉಪಾಸನೆಯ ಸ್ವಾತಂತ್ರ್ಯವನ್ನು

**ಸಮಾನತೆ**

ಸ್ಥಾನಮಾನ ಮತ್ತು ಅವಕಾಶಗಳ ಸಮತೆಯನ್ನು
ದೊರೆಯುವಂತೆ ಮಾಡುವುದಕ್ಕಾಗಿ

**ಭ್ರಾತೃತ್ವ**

ವ್ಯಕ್ತಿ ಗೌರವ, ದೇಶದ ಏಕತೆ ಮತ್ತು ಸಮಗ್ರತೆಗಾಗಿ ಎಲ್ಲರಲ್ಲಿ
ಭ್ರಾತೃತ್ವ ಭಾವನೆಯನ್ನು ಮೂಡಿಸುವುದಕ್ಕೆ
ದೃಢಸಂಕಲ್ಪ ಮಾಡಿ

**ನಮ್ಮ ಸಂವಿಧಾನ ಸಭೆಯಲ್ಲಿ**

1949ನೆಯ ಇಸವಿಯ ನವೆಂಬರ್ ತಿಂಗಳ 26ನೇ ದಿನದಂದು

**ಈ ಸಂವಿಧಾನವನ್ನು ನಮಗೆ ನಾವೇ ಅರ್ಪಿಸಿಕೊಂಡು,**
**ಅಂಗೀಕರಿಸಿ, ಶಾಸನವಾಗಿ ವಿಧಿಸಿಕೊಂಡಿದ್ದೇವೆ.**

PRINCIPAL
Hurakadli Ajja Law College
Dharwad-580 008

L.E.A.'s HURAKADLI AJJA LAW COLLEGE ★
DHARWAD 580 008 KARNATAKA

Scanned with CamScanner

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಹಾಗೂ
ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆಯ,
ಹುರಕಡ್ಲಿ ಅಜ್ಜ ಕಾನೂನು ಮಹಾವಿದ್ಯಾಲಯ, ಧಾರವಾಡ.

*IQAC ಅಡಿಯಲ್ಲಿ*

"ಸಂವಿಧಾನ ದಿನಾಚರಣೆ-2023" ರ ಅಂಗವಾಗಿ

# "ಕಾನೂನು ಅರಿವು-ನೆರವು ಕಾರ್ಯಕ್ರಮ"

ದಿನಾಂಕ: 27-11-2023 ಸಮಯ: ಬೆಳಿಗ್ಗೆ 10-00 ಗಂಟೆಗೆ

ಪ್ರಾರ್ಥನೆ : ಕುಮಾರಿ ಶೈಲು ಎಲ್.
ತೃತೀಯ ವರ್ಷದ ವಿದ್ಯಾರ್ಥಿನಿ

ಸ್ವಾಗತ ಭಾಷಣ : ಡಾ. ಸವಿತಾ ಎಲ್. ಪಾಟೀಲ
ಪ್ರಾಚಾರ್ಯರು

ಮುಖ್ಯ ಅತಿಥಿಗಳ ಪರಿಚಯ : ಶ್ರೀಮತಿ. ಶಶಿಕಲಾ ದಫಳಿ
ತೃತೀಯ ವರ್ಷದ ವಿದ್ಯಾರ್ಥಿನಿ

ಉದ್ಘಾಟನೆ :ಗೌರವಾನ್ವಿತ ಶ್ರೀ ಜೆರಾಲ್ಡ್ ರುಡೋಲ್ಫ್ ಮೆಂಡೋನ್ಸಾ
2ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಧಾರವಾಡ.

## ಸಂವಿಧಾನ ಪೀಠಿಕೆ ವಾಚನ

ನೆನಪಿನ ಕಾಣಿಕೆ &
ಹೂಗುಚ್ಛ ಸಮರ್ಪಣೆ : ಗೌರವಾನ್ವಿತ ಶ್ರೀ ಜೆರಾಲ್ಡ್ ರುಡೋಲ್ಫ್ ಮೆಂಡೋನ್ಸಾ
2ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಧಾರವಾಡ.

ಮುಖ್ಯ ಅತಿಥಿಗಳು : ಶ್ರೀ ಪರಶುರಾಮ ಎಫ್. ದೊಡ್ಡಮನಿ
ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಸದಸ್ಯ ಕಾರ್ಯದರ್ಶಿಗಳು,
ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಧಾರವಾಡ.

ಅತಿಥಿ ಉಪನ್ಯಾಸಕರು ಶ್ರೀ. ಕೆ. ಬಿ. ನಾವಲಗಿಮಠ
ಹಿರಿಯ ನ್ಯಾಯವಾದಿಗಳು ಹಾಗೂ ನಿಕಟ ಪೂರ್ವ ಭಾರತದ ಸಹಾಯಕ
ಸೋಲಿಸಿಟರ್ ಜನರಲ್, ಕರ್ನಾಟಕ ಉಚ್ಚನ್ಯಾಯಾಲಯ, ಧಾರವಾಡ ಪೀಠ, ಧಾರವಾಡ.

ಅತಿಥಿಗಳು ಶ್ರೀ. ಸಿ. ಎಸ್. ಪೋಲಿಸ್‌ಪಾಟೀಲ
ಅಧ್ಯಕ್ಷರು, ವಕೀಲರ ಸಂಘ, ಧಾರವಾಡ.

ಶ್ರೀ. ಸಿ. ಬಿ. ಮಣ್ಣಿ
ಹಿರಿಯ ನ್ಯಾಯವಾದಿಗಳು ಹಾಗೂ ಗೌರವ ಕಾರ್ಯದರ್ಶಿಗಳು, ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ, ಧಾರವಾಡ.

ಸಂಯೋಜಕರು ಶ್ರೀ. ಬಿ. ಬಿ. ಸಂತೋಜಿ
ಎನ್‌ಎಸ್‌ಎಸ್ ಸಂಯೋಜಕರು ಹಾಗೂ ಕಾನೂನು ಅರಿವು-ನೆರವು ಸಂಯೋಜಕರು.

ಪ್ರಾಚಾರ್ಯರು ಡಾ. ಸವಿತಾ ಎಲ್. ಪಾಟೀಲ
ಪ್ರಾಚಾರ್ಯರು, ಹುರಕಡ್ಲಿ ಅಜ್ಜ ಕಾನೂನು ಮಹಾವಿದ್ಯಾಲಯ, ಧಾರವಾಡ.

ಅಧ್ಯಕ್ಷತೆ : ಶ್ರೀ. ಆರ್. ಯು ಬೆಳ್ಳಕ್ಕಿ
ಹಿರಿಯ ನ್ಯಾಯವಾದಿಗಳು ಹಾಗೂ ಕಾರ್ಯಾಧ್ಯಕ್ಷರು, ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ, ಧಾರವಾಡ.

ಅತಿಥಿ ಉಪನ್ಯಾಸಕರಿಂದ ವಿಶೇಷ ಉಪನ್ಯಾಸ : ಶ್ರೀ. ಕೆ. ಬಿ. ನಾವಲಗಿಮಠ

ಅಧ್ಯಕ್ಷೀಯ ಭಾಷಣ : ಶ್ರೀ. ಆರ್. ಯು ಬೆಳ್ಳಕ್ಕಿ
ಹಿರಿಯ ನ್ಯಾಯವಾದಿಗಳು ಹಾಗೂ ಕಾರ್ಯಾಧ್ಯಕ್ಷರು, ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ, ಧಾರವಾಡ.

ವಂದನಾರ್ಪಣೆ : ಕುಮಾರ ವಿಠಲಗೌಡ ಪಾಟೀಲ

ಕಾರ್ಯಕ್ರಮ ನಿರೂಪಣೆ : ಕುಮಾರ ಆನಂದ ಕಾತರಕಿ

L.E.A.'s HURAKADLI AJJA LAW COLLEGE DHARWAD 580 008 KARNATAKA

PRINCIPAL
Hurakadli Ajja Law College
Dharwad-580 008

L. E. Association's

# HURAKADLI AJJA LAW COLLEGE, DHARWAD.

## REPORT

On the occasion of Constitution Day celebrations, as letter received from District Legal Services Authority, Dharwad and Registrar, Karnataka State Law Univerisity, Hubballi dtd. 25-11-2023 ,Constitution Day Celebration was held in the college in association with the District Legal Services Authority, Dharwad at 10:00am on 27th December, 2023. Kum. Shailu L. sang the invocation song, Principal Dr. Savita L. Patil welcomed the gathering, Smt. Shashikala D of final year LL.B. introduced the guests. Hon'ble. Shri Zerald Rudolf Mendonna, 2nd Additional Districts and Sessions Judge Dharwad, inaugurated the function and spoke on the importance of legal aid awareness. Shri Parashuram Doddamani Sr. Civil Judge and Member Secretary DLSA, Dharwad, Shri R. K. Navalgimath, Sr. Adv. and Guest faculty of the college, Shri C. S. Policepatil President, DBA were present and alsospoke on the importance of Constitution, efforts of the Constituent Assembly and need for legal awareness and legal aid. L.E.A's Chairman Shri R U Bellakki gave away the presidential remarks and Kum. Vittalagouda Patil proposed the vote of thanks.

Date 27.11.2023.

L.E.A.'s HURAKADLI AJJA LAW COLLEGE ★ DHARWAD 580 008 KARNATAKA

PRINCIPAL
Hurakadli Ajja Law College
Dharwad-580 008







CONSTITUTION DAY CELEBRATION.

27-11-2023

L.E.A.'s HURAKADLI AJJA LAW COLLEGE DHARWAD 580 008 KARNATAKA

PRINCIPAL
Hurakadli Ajja Law College
Dharwad-580 008







L.E.A.'s HURAKADLI AJJA LAW COLLEGE
DHARWAD
580 008
KARNATAKA

**PRINCIPAL**
**Hurakadli Ajja Law College**
**Dharwad-580 008**

# ಸಂವಿಧಾನ ದಿನ ಆಚರಣೆ



ಧಾರವಾಡದ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆಯ ಹುರಕಡ್ಲಿ ಅಜ್ಜ ಕಾನೂನು ಮಹಾವಿದ್ಯಾಲಯದಲ್ಲಿ ಸಂವಿಧಾನ ದಿನ ಆಚರಿಸಲಾಯಿತು.

■ **ವಿಕ ಸುದ್ದಿಲೋಕ** ಧಾರವಾಡ

ನಗರದ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆಯ ಹುರಕಡ್ಲಿ ಅಜ್ಜ ಕಾನೂನು ಮಹಾವಿದ್ಯಾಲಯ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಸಹಯೋಗದಲ್ಲಿ ಸಂವಿಧಾನ ದಿನಾಚರಣೆ ಅಂಗವಾಗಿ ಕಾನೂನು ಅರಿವು ನೆರವು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ನ್ಯಾಯವಾದಿ ಸಿ.ಬಿ.ಮಟ್ಟಿ ಮಾತನಾಡಿ, ಸಂವಿಧಾನದ ಉದ್ದೇಶಗಳನ್ನು ನಿತ್ಯ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಇದರಿಂದ ಉತ್ತಮ ಸಮಾಜ ನಿರ್ಮಿಸಲು ಸಾಧ್ಯ ಎಂದರು. ಹಿರಿಯ ನ್ಯಾಯವಾದಿ ಕೆ.ಬಿ. ನಾವಲಗಿ ಮತ ಮಾತನಾಡಿ, ಭಾರತದ ಸಂವಿಧಾನದ ಪ್ರಸ್ತಾವನೆ ಕುರಿತು ಮತ್ತು ಮೂಲಭೂತ ಹಕ್ಕು, ಧರ್ಮ, ಜಾತಿ, ಜನಾಂಗ ಮತ್ತು ಸಾರ್ವಜನಿಕ ನಿಯೋಜನೆಯ ವಿಷಯದಲ್ಲಿ ಎಲ್ಲರಿಗೂ ಸಮಾನ ಅವಕಾಶ ದೊರೆಯ ಬೇಕು. ಸ್ವಾತಂತ್ರ್ಯದ ಹಕ್ಕುಗಳ ಬಗ್ಗೆ ತಿಳಿಸಿದರು.

ನ್ಯಾಯಾಧೀಶ ಜೆರಾಲ್ಡ್ ರುಡೋಲ್ಫ್ ಮೆಂಡೋನ್ಸಾ, ವಕೀಲ ಸಂಘದ ಅಧ್ಯಕ್ಷ ಸಿ.ಎಸ್.ಪೋಲಿಸ್‌ಪಾಟೀಲ, ಆರ್.ಯು. ಬೆಳ್ಳಕ್ಕಿ, ಡಾ.ಸವಿತಾ ಎಲ್.ಪಾಟೀಲ, ಶಶಿಕಲಾ ದಫಳಿ, ಡಾ.ಎಸ್.ಎಸ್.ಗಾಳಿಮಠ, ಎಸ್.ಎಸ್.ಪಾಟೀಲ ಇತರರಿದ್ದರು.

L.E.A.'s HURAKADLI AJJA LAW COLLEGE ★
DHARWAD
580 008
KARNATAKA

PRINCIPAL
Hurakadli Ajja Law College
Dharwad-580 008